ಮತ್ತು ಅಮಿತವಾದ ಸಹನೆಗಳಿಂದ ಎದುರುಗೊಳ್ಳಲು ಸಾಧ್ಯವಿತ್ತೇ?

ತರಕಾರಿಯಂಗಡಿಯನ್ನು ಬೊಂಬೆಯಂಗಡಿಯಂತೆ ಬಾಯಿಬಿಟ್ಟುಕೊಂಡು ನೋಡುವ ಹಡೆವೆಂಕಟ, ಮಗಳು ಗಂಗಾಳಿಗೆ ಕೇದಿಗೆಜಡೆಯೆಂದರೆ ಇಷ್ಟವೆಂದೂ, ಹಿತ್ತಿಲಿನ ತೋಟವೆಂದರೆ ಪ್ರಾಣವೆಂದೂ ನೆನಪಿಟ್ಟುಕೊಂಡಿರುವವನು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಕಾಯಿಲೆ ಬಿದ್ದಿರುವ ಜುಗ್ಗ ಶೇಷಣ್ಣನಿಗಾಗಿ ಮಿಡಿಯುತ್ತ, ಹೆಂಡತಿಯಿಂದಲ್ಲದಿದ್ದರೆ ಮಗಳಿಂದಲಾದರೂ ಗಂಜಿ ಬೇಯಿಸಿಕೊಂಡು ಹೋಗಿ ಕುಡಿಸಿ ಆರೈಕೆ ಮಾಡಿ ಬರುವವನು. ಯಾರೇ ಕಟಕಿಯಾಡಿದರೂ, ಮಗನೇ ಕೈಯೆತ್ತಿದರೂ ನಿರ್ಲಿಪ್ತವಾಗಿ ಅವನ್ನೆಲ್ಲ ಎದುರಿಸಿ ಏನೂ ಆಗದವರ ಥರ ನಡೆಯಬಲ್ಲವನು.

ಹಡೇವೆಂಕಟನ ಅಧ್ಯಾತ್ಮದ ಕಲ್ಪನೆಯೂ ಎಂಥವರೂ ಆಕರ್ಷಿತರಾಗುವಷ್ಟು ಸರಳ ಮತ್ತು ಸಹಜವಾಗಿದೆ. 'ಕೈ ಹಿಡಿದ ಹೆಂಡತೀನ್ನ ಬದಲಾಯಿಸೋಕೆ ಆಗಲ್ಲ, ಇನ್ನು ಪ್ರಪಂಚ ಬದಲಾಯಿಸೋಕಾಗುತ್ತ?' ಎಂದು ಕೇಳುವ ಇವನು ತನ್ನ ಹೆಣ್ಣುಮಕ್ಕಳ ಬಗ್ಗೆ ಮಾತಾಡ್ತಾ – 'ಅವರು ಕೆಡಲಾರರು, ಕೆಟ್ಟರೂ ತಪ್ಪಿಸೋಕೆ ನನ್ನಿಂದ ಸಾಧ್ಯವ?' ಅಂತಾನೆ. ಇವೆಲ್ಲ ಮೇಲ್ನೋಟಕ್ಕೆ ಯಥಾಸ್ಥಿತಿವಾದ, ಪಲಾಯನವಾದ ಎನಿಸಿಬಿಡುವುದುಂಟು. ಆದರೆ, 'ಕಣ್ಣಿನ ಹಸಿವು ಎಂದಾದರೂ ತೀರುತ್ತ?' ಎಂದವನು ಕೇಳುವಾಗ, ಈ ಅನಂತವಾದ ಲೌಕಿಕ ಸೆಳೆತವನ್ನವನು ಸೂಚಿಸುತ್ತಿರುವುದು ತಿಳಿಯುತ್ತದೆ. 'ಮರ–ಗಿಡಗಳು ದೇವರನ್ನು ಒಳಗೆ ಬಿಟ್ಟುಕೊಳ್ಳುವಂತೆ ನಾವೂ ಬಿಟ್ಟುಕೊಳ್ಳಬೇಕು', 'ತಾಯಿಯ ಈ ಮೊಲೆ ಜೀವನವಾದರೆ ಆ ಮೊಲೆ ಸಾವು. ಅವಳು ಈ ಮೊಲೆಯಿಂದ ಎತ್ತಿ ಆ ಮೊಲೆಗಿಟ್ಟುಕೊಂಡರೆ ಮುಗೀತು ಜೀವನ', 'ಮಕ್ಕಳ ಮದುವೆಯ ನಂತರ ನವಿಲಿನ ಗುಡ್ಡದ ಗುಹೆ ಸೇರಿ ಇದ್ದು ಬಿಡಬೇಕೊ' – ಈ ತೆರನಾದ ಮಾತುಗಳ ಬೆಳಕಲ್ಲಿ ನೋಡಿದಾಗ, ಅವನ ಯಥಾಸ್ಥಿತಿವಾದ ಮತ್ತು ಪಲಾಯನವಾದಗಳಿಗಿರುವ ಬೇರೊಂದು ನೆಲೆಯು ಗೋಚರವಾಗುತ್ತದೆ. 'ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನೂ ಸಲಹುವನು ಇದಕೆ ಸಂಶಯವಿಲ್ಲ' ಎಂಬ ಕನಕದಾಸರ ಮಾತುಗಳನ್ನೇ ಇವ ಬೇರೆ ರೀತಿಯಲ್ಲಿ ಹೇಳುತ್ತಿರುವನಷ್ಟೇ. ಹಾಗಾಗಿ, ಅವನದು ಮೇಲ್ನೋಟಕ್ಕೆ ಕಾಣುವ ಜಡತ್ವದ ಪರಮ ಸ್ಥಿತಿಯಲ್ಲ; ನಿಧಾನಕ್ಕೆ ಒಳಗಣ್ಣಿನ ಓದಿಗೆ ಬಿಟ್ಟುಕೊಳ್ಳುವ ಅಧ್ಯಾತ್ಮದ ಚರಮ ಸ್ಥಿತಿ.

ಹಡೆವೆಂಕಟನಂತೆ ಮಧ್ಯವಯಸ್ಸಲ್ಲೂ



ಬೆಳದಿಂಗಳನ್ನು ಕಣ್ತುಂಬಿಕೊಳ್ಳಲು, ಹಂದಾಡದಂತೆ ನಿಂತು ಸೂರ್ಯನ ಕುದುರೆಯ ಚೆಲುವಿಗೆ ಬೆರಗುಪಡಲು, ಸಂಬಂಧಿಯಲ್ಲದ ಶೇಷಣ್ಣನ ರಕ್ತವಾಂತಿ ಎತ್ತಿ ಆರೈಕೆ ಮಾಡುವ ಗುಣ ಬರಲು, ಅಭ್ಯಂಜನದ ಹೆಸರಲ್ಲಿ ಯಾವ ಭೇದ–ಭಾವವಿಲ್ಲದೆ ಎಲ್ಲ ತಲೆಗಳಿಗೆ ಎಣ್ಣೆ ಮೆತ್ತಿ ಬೆಳದಿಂಗಳು ಕಾಣಿಸುವ ಸೇವೆ ಮಾಡಲು, ಏನೆಲ್ಲ ಆದರೂ ಏನೂ ಆಗದವನಂತೆ ಸಹಜವಾಗಿರುತ್ತ ಕೈಯೂರಿ ಕೂತು ಕಣ್ಣು ಮುಚ್ಚಿ ಸುಖಿಸುತ್ತ ಊಟ ಮಾಡಲು ಪಡೆದುಕೊಂಡು ಬಂದಿರಬೇಕು. ಇನ್ನೂ ಹೇಳಬೇಕೆಂದರೆ ಅಂಥದ್ದೊಂದು ಪಾತ್ರವನ್ನು ಸೃಷ್ಟಿಸಲಿಕ್ಕೂ ಪಡೆದುಕೊಂಡು ಬಂದಿರಬೇಕು. ●